# ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## <u>ಸಿ.ಸಿಃ 218/2023</u>

ಪ್ರಾಸಾ-3, ಚಾಸಾ-1

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಘವೇಂದ್ರ |
| ತಂದೆಯ ಹೆಸರು | : | ಚಂದ್ರಶೇಖರ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಇಂಜೀನಿಯರ್ |
| ವಾಸ | : | ಬೆಂಗಳೂರು |

ಸಾಕ್ಷಿಗೆ ದಿನಾಂಕಃ 11.07.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಆರೋಪಿ ನನಗೆ ಗೊತ್ತು. ಚಾಸಾ-2 ನನ್ನ ತಂದೆ, ಚಾಸಾ-3ರಿಂದ 12ರವರು ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಗಾಯಾಳುಗಳು. ದಿಃ 03.11.2022ರಂದು ನಾನು, ಚಾಸಾ-2ರವರು ನನ್ನ ತಂದೆ ಮೈಸೂರಿಗೆ ಕೆಲಸದ ನಿಮಿತ್ತ ಹೋಗಿದ್ದು, 04.11.2022 ರಂದು ಮೈಸೂರಿನಲ್ಲಿ ಶಿವಮೊಗ್ಗ ಮತ್ತು ಕೊಯಮತ್ತೂರು ಕೆ.ಎಸ್.ಆರ್.ಟಿ.ಸಿ. ಬಸ್ ನಂ-KA-14-F-0042 ಮೈಸೂರಿನಲ್ಲಿ ಹತ್ತಿಕೊಂಡು ಚಾಮರಾಜನಗರಕ್ಕೆ ಬರುತ್ತಿದ್ದಾಗ, ಬೆಳಗಿನ ಜಾವ 1 ಗಂಟೆ 10ನಿಮಿಷದಲ್ಲಿ ಕಾಳನಹುಂಡಿ ಕ್ರಾಸ್ ಬ್ರಿಡ್ಜ್ ಹತ್ತಿರ ಬಸ್ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಬಸ್ ಅನ್ನು ಚಾಲನೆ ಮಾಡಿ ನಿಯಂತ್ರಿಸಲಾಗಿದೆ ಕಲ್ಲಿಗೆ ಡಿಕ್ಕಿ ಮಾಡಿದ್ದು, ಹಳ್ಳಕ್ಕೆ ಮುಗುಚಿಕೊಂಡಿತು. ನನ್ನ ಎರಡು ಕಾಲಿನ ಮಂಡಿಗಳಿಗೆ, ತಲೆಗೆ ಒಳ ನೋವು ಆಗಿದ್ದು, ನನ್ನ ತಂದೆಯವರಿಗೆ ಎದೆಯ ಪೆಕ್ಕೆಲುಬು ಮುರಿದು ಹೋಗಿದ್ದು, ಬಸ್ಸಿನಲ್ಲಿದ್ದ ಕೆಲವು ಪ್ರಯಾಣಿಕರು ಬಸ್ ಚಾಲಕ ಹಾಗೂ ನಿರ್ವಾಹಕನಿಗೂ ಸಣ್ಣಪುಟ್ಟ ಗಾಯಗಳಾಗಿರುತ್ತವೆ. ನಮ್ಮನ್ನು ಆ್ಯಂಬುಲೆನ್ಸ್ ನಲ್ಲಿ ಚಾಮರಾಜನಗರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಚಿಕಿತ್ಸೆ ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ

ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ಆಸ್ಪತ್ರೆಯಲ್ಲಿದ್ದಾಗ ಪೋಲಿಸರಿಗೆ ಅಪಘಾತದ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತಪಡಿಸಿದ ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಮೂರು ಚಾಯಾ ಚಿತ್ರಗಳನ್ನು ಈಗಾಗಲೇ ನಿಪಿ-1 ರಿಂದ 3 ಎಂದು ಗುರುತಿಸಲಾಗಿರುತ್ತದೆ. ಸಿ.ಡಿ.ಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೂಪಿಯು ಗೈರು ಹಾಜರು ಆಗಿದ್ದು ವಿನಾಯಿತಿ ಅರ್ಜಿ ಸಲ್ಲಿಸಲಾಗಿದೆ.

**ಪಾಟೀಸವಾಲುಃ ಶ್ರೀ ಎಂ.ಎಂ ವಕೀಲರಿಂದಃ**

ಮೈಸೂರಿನಲ್ಲಿ 12 ಗಂಟೆ ಬಸ್ಸ್ ಅನ್ನು ಹತ್ತಿರುತ್ತೇನೆ. ಬಸ್ ಹತ್ತಿದಾಗ ಬಸ್ ಸಂಖ್ಯೆ ನೋಡಿಲ್ಲ. ಬಸ್ಸಿನಲ್ಲಿರುವ ಜನ ಗೊತ್ತಿಲ್ಲ. ಚಾಸಾ-4 ರಿಂದ 12 ಯಾರು ಅಂತ ನನಗೆ ಗೊತ್ತಿಲ್ಲ. ಬಸ್ಸಿನ ಹಿಂಭಾಗದಲ್ಲಿ ಕುಳಿತುಕೊಂಡಿದ್ದೆ ಸೀಟಿನ ನಂಬರ್ ಗೊತ್ತಿಲ್ಲ. ಅಪಘಾತ ವಾಗದ ಸುಮಾರು 1 ಗಂಟೆ ಆಗಿತ್ತು. ಅಪಘಾತವಾದಗ ನಿದ್ದೆ ಮಾಡುತ್ತಿದ್ದೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿ. ಚಾಲಕನ ತಪ್ಪಿನಿಂದ__ಅಪಘಾತವಾಗಿದೆ ಎಂದರೆ ಸರಿ. ಅಪಘಾತವನ್ನು ನಾನು ನೋಡಿಲ್ಲ. ಪರಿಹಾರ ಹಣ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.

# ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## ಸಿ.ಸಿಃ 218/2023

ಪ್ರಾಸಾ-4, ಚಾಸಾ-4

ಸಾಕ್ಷಿದಾರರ ಹೆಸರು : ಲೋಹಿತ್ ಕುಮಾರ್

ತಂದೆಯ ಹೆಸರು : ಪರಮೇಶ್ವರಪ್ಪ

ವಯಸ್ಸು : 29ವರ್ಷ

ಉದ್ಯೋಗ : ವ್ಯವಸಾಯ

ವಾಸ : ಪಾತೇನಹಳ್ಳಿ, ಕಡೂರು ತಾಲ್ಲೂಕು,

ಸಾಕ್ಷಿಗೆ ದಿನಾಂಕಃ 11.07.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಆರೋಪಿ ನನಗೆ ಗೊತ್ತು. ಚಾಸಾ-1 ರಿಂದ 3, 5 ರಿಂದ 12 ಗೊತ್ತು. ನಾನು, ಮೈಸೂರಿನಿಂದ ಕೆಲಸದ ನಿಮಿತ್ತ 04.11.2022 ರಂದು ಮೈಸೂರಿನಲ್ಲಿ ಶಿವಮೊಗ್ಗ ಮತ್ತು ಕೊಯಮತ್ತೂರು ಕೆ.ಎಸ್.ಆರ್.ಟಿ.ಸಿ. ಬಸ್ ನ್ನು ಮೈಸೂರಿನಲ್ಲಿ ಹತ್ತಿಕೊಂಡು ಚಾಮರಾಜನಗರಕ್ಕೆ ಬರುತ್ತಿದ್ದಾಗ, ಬೆಳಗಿನ ಜಾವ 1 ಗಂಟೆ10ನಿಮಿಷದಲ್ಲಿ ಕಾಳನಹುಂಡಿ ಕ್ರಾಸ್ ಬ್ರಿಡ್ಜ್ ಹತ್ತಿರ ಬಸ್ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಬಸ್ ಅನ್ನು ಚಾಲನೆ ಮಾಡಿ ನಿಯಂತ್ರಿಸಲಾಗಿದೆ ಕಲ್ಲಿಗೆ ಡಿಕ್ಕಿ ಮಾಡಿದ್ದು, ಹಳ್ಳಕ್ಕೆ ಮುಗುಚಿಕೊಂಡಿತು. ನನ್ನ ಎಡಭುಜಕ್ಕೆ ಪೆಟ್ಟಾಗಿದ್ದು, ಬಸ್ಸಿನಲ್ಲಿದ್ದ ಕೆಲವು ಪ್ರಯಾಣಿಕರು ಬಸ್ ಚಾಲಕ ಹಾಗೂ ನಿರ್ವಾಹಕನಿಗೂ ಸಣ್ಣಪುಟ್ಟ ಗಾಯಗಳಾಗಿರುತ್ತವೆ. ನನ್ನನ್ನೂ ಹಾಗೂ ಉಳಿದ ಪ್ರಯಾಣಿಕರನ್ನು ಆ್ಯಂಬುಲೆನ್ಸ್ ನಲ್ಲಿ ಚಿಕಿತ್ಸೆ ಗಾಗಿ ಜಿಲ್ಲಾ ಆಸ್ಪತ್ರೆ ಗೆ ಕರೆದುಕೊಂಡು ಬಂದಿರುತ್ತಾರೆ. ನಾನು ಆಸ್ಪತ್ರೆ ಚಿಕಿತ್ಸೆ ಪಡೆದುಕೊಂಡು ಅಪಘಾತ ಬಗ್ಗೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಅಪಘಾತವು ಚಾಲಕನ ತಪ್ಪಿನಿಂದ ಆಗಿರುತ್ತದೆ. ಸಾಕ್ಷಿಯು ಈಗಾಗಲೇ ಗುರುಸಲ್ಪಟ್ಟ ಕೆ.ಎಸ್.ಆರ್.ಟಿ.ಸಿ. ಬಸ್ಸಿನ ನಿಪಿ-1 ರಿಂದ

3 ಫೋಟೋಗಳನ್ನು ಮತ್ತು ಸಿ.ಡಿಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲುಃ ಶ್ರೀ ಎಂ.ಎಂ ವಕೀಲರಿಂದಃ**

ಮೈಸೂರಿನಲ್ಲಿ 12 ಗಂಟೆ ಬಸ್ಸ್ ಅನ್ನು ಹತ್ತಿರುತ್ತೇನೆ. ಬಸ್ ಹತ್ತಿದಾಗ ಬಸ್ ಸಂಖ್ಯೆ ನೋಡಿಲ್ಲ. ಬಸ್ಸಿನಲ್ಲಿರುವ ಜನ ಗೊತ್ತಿಲ್ಲ. ಚಾಸಾ-4 ರಿಂದ 12 ಯಾರು ಅಂತ ನನಗೆ ಗೊತ್ತಿಲ್ಲ. ಬಸ್ಸಿನ ಹಿಂಭಾಗದಲ್ಲಿ ಕುಳಿತುಕೊಂಡಿದ್ದ ಸೀಟಿನ ನಂಬರ್ ಗೊತ್ತಿಲ್ಲ. ಅಪಘಾತ ವಾಗದ ಸುಮಾರು 1 ಗಂಟೆ ಆಗಿತ್ತು. _ಅಪಘಾತವಾದಗ ನಿದ್ದೆ ಮಾಡುತ್ತಿದ್ದೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿ. ಚಾಲಕನ ತಪ್ಪಿನಿಂದ__ಅಪಘಾತವಾಗಿದೆ ಎಂದರೆ ಸರಿ. ಅಪಘಾತವನ್ನು ನಾನು ನೋಡಿಲ್ಲ. ಪರಿಹಾರ ಹಣ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.